**<u>1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು</u>**

**<u>ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ</u>**

**<u>O.S. No. 238/2015</u>**

**PW**: 3

ಸಾಕ್ಷಿಯ ಹೆಸರು : ದೀಪಾ ಜೋಶಿ
ಗಂಡನ ಹೆಸರು : ನವೀನ ಯಲಿಗಾರ
ವಯಸ್ಸು : 36 ವರ್ಷ
ಉದ್ಯೋಗ : ವ್ಯವಸ್ಥಾಪಕರು, ಯುಕೋ ಬ್ಯಾಂಕ ಹುಬ್ಬಳ್ಳಿ
ವಾಸಸ್ಥಳ : ಹುಬ್ಬಳ್ಳಿ.

**ದಿಃ 07.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಸ್ ಕೆ ಕೆ ವಕೀಲರಿಂದ ಃ**

ಹುಬ್ಬಳ್ಳಿಯ ಕೊಪ್ಪಿಕರ ರಸ್ತೆಯಲ್ಲಿರುವ ಯುಕೋ ಬ್ಯಾಂಕನಲ್ಲಿ ಯೂವ ಸಾಲಿನಿಂದ ಕೆಲಸ ಮಾಡುತ್ತಿದ್ದೀರಿ ಎಂದರೆ ಸಾಕ್ಷಿಯು ಜುಲೈ 2022 ರಿಂದ ಮಾಡುತ್ತಾ ಬಂದಿರುತ್ತೇನೆ ಎನ್ನುತ್ತಾರೆ. ಸೋನಿಯ ಕೇಟರ್ಸ ಗೆ ಸಂಬಂದಿಸಿದ ಎಲ್ಲಾ ದಾಖಲೆಗಳ ಬಗ್ಗೆ ಮಾಹಿತಿ ಇಲ್ಲ.

**(ಈ ಸಂದರ್ಬದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಕೆ ಕೆ ವಕೀಲರಿಂದಃ**

ಈ ಸೋನಿಯಾ ಕೇಟರ್ಸನ ವಿರುದ್ದ ಡಿ ಆರ್ ಟಿ ಯಲ್ಲಿ ದಾಖಲಿಸಿದ್ದ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ. ಡಿ ಆರ್ ಟಿ ಗೆ ಸಂಬಂದಿಸಿದ ಕಡತಗಳು ತಮ್ಮ ಕಚೇರಿಯಲ್ಲಿರುತ್ತದೆಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸೋನಿಯ ಕೇಟರ್ಸನ ಬಗ್ಗೆ ಯಾರಿಗೆ ಮಾಹಿತಿ ಇರುತ್ತದೆಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ಸೋನಿಯ ಕೇಟರ್ಸನ ಸಿಟಿಸರ್ವೆ ನಂಬರಃ3731, 3732, 3740, 3749, 3750, 3755 ಆಸ್ತಿಯ ಅಡಮಾನ ಮಾಡಿದ ಆಸ್ತಿಯನ್ನು ಮಾರಾಟ ಮಾಡುವಾಗ ಯಾರು ವ್ಯವಸ್ಥಾಪಕರಾಗಿದ್ದರು ಎಂದರೆ ಗೊತ್ತಿಲ್ಲ. ತಮ್ಮ ಬ್ಯಾಂಕನಲ್ಲಿ ಯಾವೆಲ್ಲಾ ವ್ಯವಸ್ಥಾಪಕರು ಕಾರ್ಯನಿರ್ವಹಿಸಿರುತ್ತಾರೆಂದು ತಿಳಿದುಕೊಳ್ಳಬಹುದೆಂದರೆ ಸರಿ. ಸೋನಿಯ ಕೇಟರ್ಸನ ಬಗ್ಗೆ ತಮಗೆ ಯಾವೆಲ್ಲಾ ಮಾಹಿತಿ ಇದೆ ಎಂದರೆ ಸಾಕ್ಷಿಯು ಕಳೆದ ಬಾರಿ ಹಾಜರುಪಡಿಸಿದ

ಹಿಂಬರಹ ಮತ್ತು ದಾಖಲೆಗಳನ್ನು ಬಿಟ್ಟು ಬೇರೆ ಮಾಹಿತಿ ಇಲ್ಲ ಎನ್ನುತ್ತಾರೆ. ಯಾವೆಲ್ಲಾ ದಾಖಲೆಗಳನ್ನು ಸಿ ಬಿ ಐ ರವರು ತೆಗೆದುಕೊಂಡು ಹೋಗಿರುತ್ತಾರೆಂದು ಹೇಳಲು ಬರುವದಿಲ್ಲ. ತಮಗೆ ನ್ಯಾಯಾಲಯವು ದಾಖಲೆಗಳನ್ನು ಹಾಜರುಪಡಿಸುವಂತೆ ಸಮನ್ಸ ನೀಡಲಾಗಿದ್ದು ಅದರಲ್ಲಿ ಯಾವೆಲ್ಲಾ ದಾಖಲೆಗಳು ಬೇಕೆಂದು ಉಲ್ಲೇಖಿಸಲಾಗಿತ್ತು ಎಂದರೆ ಸರಿ. ಯಾವದೇ ಒಂದು ದಾಖಲೆಯನ್ನು ಯಾವದೇ ಒಂದು ಸಂಸ್ಥೆಗೆ ಅಥವಾ ವ್ಯಕ್ತಿಗೆ ನೀಡಿದಾಗ ಯಾವ ಕಾರಣಕ್ಕಾಗಿ ಯಾರಿಗೆ , ಯಾವ ದಿನಾಂಕದಂದು ನೀಡಲಾಗಿದೆ ಎಂಬ ಬಗ್ಗೆ ಉಲ್ಲೇಖ ಇರುತ್ತದೆಂದರೆ ಸರಿ. ನ್ಯಾಯಾಲಯದಿಂದ ಸಮನ್ಸನ್ನು ಸ್ವೀಕರಿಸಿದ ನಂತರ ಉಲ್ಲೇಖಿಸಿರುವ ದಾಖಲೆಗಳನ್ನು ಪಡೆದುಕೊಳ್ಳಲು ಹಾಗೂ ಅದರ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನ ಮಾಡಿರುತ್ತೇನೆ. ಈ ರೀತಿ ವ್ಯವಹಾರ ಮಾಡಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ಇ-ಮೇಲ ಮತ್ತು ಟೆಲಿಪೋನಿಕ ಮ್ಯಾಸೇಜಗಳನ್ನು ಬೇಕಾದರೆ ಹಾಜರುಪಡಿಸಬಹುದು. ಸಾಕ್ಷಿಗೆ ಕೆಲವೊಂದು ದಾಖಲೆಗಳನ್ನು ನೀಡಿ ಅದರಲ್ಲಿ ಡಿ ಆರ್ ಟಿ ಗೆ ಸಂಬಂದಿಸಿದ ದಾಖಲೆ ಇದೆಯಾ ಎಂದರೆ ಸಾಕ್ಷಿಯು ದಾಖಲೆಗಳನ್ನು ನೋಡಿ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ತೋರಿಸಿದ ದಾಖಲೆಯು ಯಾವದು ಎಂದು ಗುರುತಿಸುವಿಕೆಯ ಉದ್ದೇಶದಿಂದ ಅದನ್ನು ನಿಐ 1 ಎಂದು ಗುರುತಿಸಲಾಯಿತು. ಇದು ನಾಟ್ ಅಡ್ಮಿಸಿಬಲ್ ಇನ್ ಎವಿಡೆನ್ಸ ಎಂದು ಸ್ಪಷ್ಟೀಕರಿಸಲಾಯಿತು.

2. ಸಾಕ್ಷಿಗೆ ನಿಪಿ 5 ರ 3 ನೇ ಪುಟದಲ್ಲಿರುವ 4 ನೇ ಖಂಡಿಕೆಯನ್ನು ಓದಿ ತಿಳಿಸಿ ಕೇಳಿದ್ದು ಅದನ್ನು ನೋಡಿ ಪೂರ್ವಾನುಮತಿ ಬೇಕೆಂದು ನುಡಿಯುತ್ತಾರೆ. ಮದ್ಯಂತರ ಅರ್ಜಿ ಅಂದರೆ ಸಿವಿಲ್ ಪ್ರಕ್ರಿಯಾ ಕ್ರಮಾದೇಶ 16 ನಿಯಮಾವಳಿ 1 ಮತ್ತು 2 ರಲ್ಲಿ ಸಲ್ಲಿಸಿದ ಅರ್ಜಿಯಲ್ಲಿ ತಾವು ಹಾಜರು ಪಡಿಸಬೇಕಾಗಿರುವ ದಾಖಲೆಗಳ ಬಗ್ಗೆ ಉಲ್ಲೇಖಿಸಿರುತ್ತಾರೆಂದರೆ ಸರಿ. ಪೂರ್ವಾನುಮತಿಯನ್ನು ಪಡೆದ ಬಗ್ಗೆ ಅಥವಾ ಇದಕ್ಕೆ ಸಂಬಂದಿಸಿದಂತೆ ನಾನು ಯಾವದೇ ದಾಖಲೆಗಳನ್ನು ಕಳೆದ ಬಾರಿ ನ್ಯಾಯಾಲಯಕ್ಕೆ ಹಾಜರುಪಡಿಸಿರುವದಿಲ್ಲ. ಸಾಕ್ಷಿಯು ಹಾಜರುಪಡಿಸಿದ ದಾಖಲೆಗಳನ್ನು ಅಂದರೆ ದಿನಾಂಕಃ04.12.2024 ರಂದು ಹಾಜರುಪಡಿಸಿದ ದಾಖಲೆಗಳನ್ನು ಒಟ್ಟಾಗಿ (ಮೂರು ಪುಟಗಳು ಇದ್ದು) ನಿಪಿ 16 ಎಂದು ಗುರುತಿಸಲಾಯಿತು.

**(ಈ ಸಂದರ್ಬದಲ್ಲಿ ಸಾಕ್ಷಿಯು ಹಿಂದಿನ ಅದಿಕಾರಿಯ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಿದ್ದು ಸಾಕ್ಷಿಗೆ 2004 ರಿಂದ 2008 ರವರೆಗೂ ಬಾಂಕನಲ್ಲಿ ಕರ್ತವ್ಯ ನಿರ್ವಹಿಸಿದ ವ್ಯವಸ್ಥಾಪಕರ ಪಟ್ಟಿಯನ್ನು ಒದಗಿಸುವಂತೆ ಆದೇಶಿಸಿ ಪಾಟೀ ಸವಾಲು ಮುಂದೂಡಲಾಯಿತು.)**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**